ದಿನಗೂಲಿ ನೌಕರರ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ತೀರ್ಮಾನ

೧೪೬೧(ಎ) ಶ್ರೀ ಪಂಪಾಪತಿ (ದಾವಣಗೆರೆ) — ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಲೋಕೋಪಯೋಗಿ ದಿನಗೂಲಿ ಕಾರ್ಮಿಕರ ಬಗ್ಗೆ ಸರ್ವಶ್ರೇಷ್ಟ ನ್ಯಾಯಾಲಯವು ಅವರಿಗೂ ಅವರು ಕೆಲಸಕ್ಕೆ ಸೇರಿದಂದಿನಿಂದ ಸಮಾನ ಕೆಲಸಕ್ಕೆ ಸಮಾನವೇತನ ನೀಡಬೇಕೆಂದು ನೀಡಿರುವ ತೀರ್ಪು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ತೀರ್ಪು ರಾಜ್ಯ ಸರ್ಕಾರದ ಎಲ್ಲಾ ದಿನಗೂಲಿ ಕೆಲಸಗಾರರಿಗೂ ಅವರಲ್ಲೂ ಲೋಕೋಪಯೋಗಿ ಮತ್ತು ನೀರಾವರಿ ದಿನಗೂಲಿ ಕೆಲಸಗಾರರಿಗೂ ಅನ್ವಯಿಸುವುದಿಲ್ಲವೇ ?

ಇ) ಸಮಾನ ಕೆಲಸಕ್ಕೆ ಸಮಾನ ಸಂಬಳ ಮತ್ತು ಸಮಾನ ಸೌಲಭ್ಯಗಳು ಎಂಬ ನೀತಿಯನ್ನು ಸರ್ಕಾರದವರು ಕೆಲವು ಮಂತ್ರಿಮಾಗಿ ಪುರಸಭೆಗಳ ದಿನಗೂಲಿ ನೌಕರರಿಗೆ ಅನ್ವಯಿಸಿ ಆಜ್ಞೆ ಹೊರಡಿಸಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಈ ತೀರ್ಪಿನ ತಿರುಳನ್ನು ಸರ್ಕಾರದ ಇನ್ನಿತರ ಅದರಲ್ಲೂ ಲೋಕೋಪಯೋಗಿ ಮತ್ತು ನೀರಾವರಿ ಕೆಲಸಗಾರರಿಗೆ (ದಿನಗೂಲಿ) ಅನ್ವಯಿಸದಿರಲು ಕಾರಣಗಳೇನು ? ಹಾಗೂ ಯಾವಾಗ ಅನ್ವಯಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಗಮನಕ್ಕೆ ಬಂದಿದೆ.

ಆ) ಅನ್ವಯವಾಗುವುದಿಲ್ಲ.

ಇ) ಸರ್ಕಾರವು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಲ್ಲಿ ಆ ಇಲಾಖೆಯ ಅಡಳಿತ ನಿಯಂತ್ರಣಕ್ಕೆ ಬರುವ ಸ್ಥಳೀಯ ಸಂಸ್ಥೆಗಳ ದಿನಗೂಲಿ ನೌಕರರಿಗೆ ಸಂಬಂಧಿಸಿದಂತೆ ಆಜ್ಞೆ ಹೊರಡಿಸಿರುವುದಾಗಿ ತಿಳಿದಬಂದಿದೆ.

ಈ) ದಿನಗೂಲಿ ನೌಕರರ ಸಂಘಗಳು, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಇತರ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ಪ್ರಾರ್ಥಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಈ ವಿಷಯದಲ್ಲಿ ಮುಂದಿನ ನಿರ್ಧಾರ ತೆಗೆದುಕೊಳ್ಳಲು ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗಾಗಿ ಕಾಯಲಾಗಿದೆ.

ಶ್ರೀ ಪಂಪಾಪತಿ. — ಮಾನ್ಯ ಮಂತ್ರಿಗಳು ನನ್ನ ಮೊದಲನೆಯ ಪ್ರಶ್ನೆ ಗಮನಕ್ಕೆ ಬಂದಿದೆ. ಎಂದು ಎರಡನೆಯ ಪ್ರಶ್ನೆಗೆ 'ಅನ್ವಯವಾಗುವುದಿಲ್ಲ' ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇರತಕ್ಕದ್ದು ಕೇಂದ್ರ ಲೋಕೋಪಯೋಗಿ ದಿನಗೂಲಿ ಕಾರ್ಮಿಕರ ಬಗ್ಗೆ ಸರ್ವಶ್ರೇಷ್ಟ ನ್ಯಾಯಾಲಯವು ಅವರಿಗೂ ಅವರು ಕೆಲಸಕ್ಕೆ ಸೇರಿದಂದಿನಿಂದ ಸಮಾನ ಕೆಲಸಕ್ಕೆ ಸಮಾನವೇತನ ನೀಡಬೇಕೆಂದು ನೀಡಿರುವ ತೀರ್ಪು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಈ ತೀರ್ಪು ರಾಜ್ಯ ಸರ್ಕಾರದ ಎಲ್ಲಾ ದಿನಗೂಲಿ ಕೆಲಸಗಾರರಿಗೂ ಅದರಲ್ಲೂ ಲೋಕೋಪಯೋಗಿ ಮತ್ತು ನೀರಾವರಿ ದಿನಗೂಲಿ ಕೆಲಸಗಾರರಿಗೂ ಅನ್ವಯಿಸುವುದಿಲ್ಲವೇ ಇತರೆ ಇಲಾಖೆಗಳವರು ಕೊಡುತ್ತಿರುವಾಗ ಲೋಕೋಪಯೋಗಿ ಇಲಾಖೆಯಲ್ಲಿ ರತಕ್ಕ ದಿನಗೂಲಿ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ಸಂಬಳ ಮತ್ತು ಸಮಾನ ಸೌಲಭ್ಯಗಳು ಆ ರೀತಿ ಕೊಡುವುದಕ್ಕೆ ಆಗುವುದಿಲ್ಲವೆ ? ಕೊಡುವುದಕ್ಕಾಗುವುದಿಲ್ಲವೆನ್ನುವುದು ಯಾವ ನ್ಯಾಯ ? ಇದರಿಂದ ಸರ್ವ ಶ್ರೇಷ್ಟನ್ಯಾಯಾಲಯದ ತೀರ್ಪನ್ನು ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲವೆ ? ಇದರಿಂದ ನೌಕರರಿಗೆ ಅನುಕೂಲವಾಗುವುದಿಲ್ಲ. ಇದರ ಬಗ್ಗೆ ಆದಷ್ಟು ಬೇಗ ಪರಿಶೀಲನೆ ಮಾಡಿ ಮಾನ್ಯ ಮಂತ್ರಿಗಳು ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಕೊಟ್ಟಿರುವುದನ್ನು ಕರಾರುವಾಕ್ಕಾಗಿ ಕೊಟ್ಟಿದ್ದೇವೆ. ಕೇಂದ್ರದಲ್ಲಿ ಒಬ್ಬನಿಗೆ ೧ ಸಾವಿರ ಸಂಬಳ ಕೊಡಬೇಕೆಂದು ಹೇಳಿದ್ದಾರೆ. ಎನ್ನುವ ವಿಚಾರ ಆದು ಪತ್ರಿಕೆಯಲ್ಲಿ ಬಂದಿರುವುದನ್ನು ನಮ್ಮ ಅಧಿಕಾರಿಗಳು ಹೇಳಿದರು. ನಾನಂತೂ ನೋಡಿಲ್ಲ. ಮಾನ್ಯ ಸದಸ್ಯರು ನಮ್ಮ

ಇಲಾಖೆಯ ಕೆಲಸಗಾರರಿಗೆ ಇದು ಅನ್ವಯವಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ 'ಅನ್ವಯವಾಗುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಇಲ್ಲಿಯೇ ಕೊಟ್ಟಂತಹ ಉತ್ತರ ಯಾವುದೋ ಒಂದು ಪತ್ರಿಕೆಯಲ್ಲಿ ಯಾವ ರೀತಿ ಚರ್ಚೆಯಾಗಿದೆಯೋ ಗೊತ್ತಿಲ್ಲ. ರಾಜ್ಯಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ. ಸುಪ್ರೀಂಕೋರ್ಟ್‌ನ ತಡೆಯಾಜ್ಞೆ ಇದೆ, ತಡೆಯಾಜ್ಞೆ ಬರುವುದಕ್ಕೆ ಮುಂಚೆ ಅಪಾಯಿಂಟ್ ಆದವರನ್ನು ಯಾರನ್ನೂ ತೆಗೆಯಕೂಡದೆಂದು ರಾಜ್ಯಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ. ದಿನಗೂಲಿ ಆಧಾರದ ಮೇಲೆ ಕೆಲಸ ಮಾಡತಕ್ಕವರು ಯಾರಿದ್ದಾರೆ, ಅವರಿಗೂ ಕೇಂದ್ರದಲ್ಲಿ ಇರುವವರಿಗೂ ವ್ಯತ್ಯಾಸವಿದೆ. ಹಿಗೆ ಇರುವಾಗ ಅವರು ಹೇಗೆ ಮಾಡುತ್ತಾರೊ ನನಗೆ ಗೊತ್ತಿಲ್ಲ. ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೆಜ್ ಬೋರ್ಡ್‌ನಲ್ಲಿ ಏನೋ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇವೊತ್ತು ಅಪ್ಪರ್ ಭದ್ರಾನಲ್ಲಿ ಸರ್ವೆ ಮಾಡಿಸಲಿಕ್ಕೆ ೨೦ ಜನ ಕ್ಯಾಷ್ಯುಯಲ್ ಲೇಬರ್ ತೆಗೆದುಕೊಂಡಿರುತ್ತಾರೆ ಎಂದು ಇಟ್ಟುಕೊಳ್ಳೋಣ. ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂದು ಹೇಳುತ್ತೀರಿ, ಆ ಸರ್ವೆ ಕೆಲಸ ಮುಗಿದ ಮೇಲೆ ಆ ೨೦ ಜನರನ್ನು ಎಲ್ಲಿಗೆ ಕಳುಹಿಸಬೇಕು? ನನ್ನ ಮನೆಯಲ್ಲಿ ಇಟ್ಟುಕೊಳ್ಳಬೇಕೇನು? ಆದ್ದರಿಂದ, ಈ ವಿಷಯದ ಬಗ್ಗೆ ಸ್ವಲ್ಪಮಟ್ಟಿಗೆ ಆಳವಾಗಿ ಪರಿಶ್ರಮ ಬೇಕಾಗುತ್ತದೆ. ದಯವಮಾಡಿ ತಮಗೆ ಕ್ಷಮೆ ಕೇಳಿಕೊಳ್ಳುತ್ತೇನೆ. ಸಣ್ಣಪುಟ್ಟ ಕೆಲಸಕ್ಕೆ ನೇಮಿಸಿಕೊಂಡಂಥ ದಿನಗೂಲಿ ನೌಕರರು, ದಾಮಾಷಾ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಈಗ ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ, ಒಂದು ಬ್ರಿಡ್ಜ್ ಬಿದ್ದುಹೋಗಿರುತ್ತದೆ ಎಂದು ಇಟ್ಟುಕೊಳ್ಳಿ ಅಲ್ಲಿಗೆ ಟೆಂಪರರಿಯಾಗಿ ಎರಡು ಮೂರು ತಿಂಗಳು ಮೇಲ್ವಿಚಾರಣೆ ನೋಡಿಕೊಳ್ಳಲಿಕ್ಕೆ ಒಬ್ಬ ಹುಡುಗನಿಗೆ ಅಲ್ಲಿ ಇಡುತ್ತೇವೆಂದು ಇಟ್ಟುಕೊಳ್ಳಿ ಸಮಾನ ಕೆಲಸಕ್ಕೆ ಸಮಾನ ವೇತನ ಅಂದರೆ ಆ ಬ್ರಿಡ್ಜ್ ಕೆಲಸ ಮುಗಿದ ಮೇಲೆ ಆ ರೀತಿ ಹೇಳಲಿಕ್ಕೆ ಆಗುತ್ತದೆಯೇ ? ಇದರ ಬಗ್ಗೆ ವಿವರ್ಶೆ ಮಾಡಬೇಕಾಗುತ್ತದೆ. ಮಾನ್ಯ ಸಾಗರ್ ಅವರನ್ನು ಕೇಳಿದಾಗ ಅದು ಯಾವುದೇ ನಿಗಮಗಳಲ್ಲಿ ಬೇರೆ ಬೇರೆ ಇದೆ ಎಂದು ಹೇಳಿದರು. ಈ ದೇಶದ ಕಾನೂನು ಪಂಡಿತರು ಚೆನ್ನಾಗಿ ಬರೆಯುತ್ತಾರೆ. ಕಂಪನಿ ಆಕ್ಟ್ ಬೇರೆ ಇದೆ, ಅದನ್ನೆಲ್ಲಾ ಇಲ್ಲಿ ತೆಗೆದುಕೊಂಡು ಬಂದು ಮಾಡಬೇಕೆಂದರೆ ಮಾಡೋಣ. ಆ ವಿಷಯವೇ ಬೇರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಅದು ಅನ್ವಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ದಿನಗೂಲಿ ನೌಕರರ ವಿಷಯ ನಮಗೂ ಗೊತ್ತಿದೆ, ಮಾನ್ಯ ಸದಸ್ಯರಾದ ಪಂಪಾಪತಿಯವರಿಗೂ ಗೊತ್ತಿದೆ. ಇವೊತ್ತು ದಿನಗೂಲಿ ಕೆಲಸ ಕೊಡಿಸಿ ಎಂದು ನಮ್ಮ ಹತ್ತಿರ ಮಾತ್ರವೇ ಬರುವುದಿಲ್ಲ, ಮಾನ್ಯ ಪಂಪಾಪತಿಯವರ ಹತ್ತಿರವೂ ಸಾಕಷ್ಟು ಜನ ಸುತ್ತುತ್ತಿರುತ್ತಾರೆ. ದಿನಗೂಲಿ ಕೆಲಸ ಕೊಡತಕ್ಕದ್ದು ಲೋಕೋಪಯೋಗಿ ಇಲಾಖೆ ನಿರುದ್ಯೋಗ ಸಮಸ್ಯೆ ಬಗೆಹರಿಸಂಥ ಇಲಾಖೆ ಎಂದು ತಪ್ಪು ಕಲ್ಪನೆ ಇಟ್ಟು ಕೊಳ್ಳಬೇಕಾದಂಥ ಅವಶ್ಯಕತೆ ಇಲ್ಲ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನದ ಬಗ್ಗೆ ಕಾಯತ್ತಿದ್ದೇವೆ. ಅವರು ಏನು ಹೇಳುತ್ತಾರೆಯೋ ನೋಡಿ ಆ ರೀತಿ ಒಪ್ಪಿಕೊಳ್ಳೋಣ.

ಶ್ರೀ ಪಂಪಾಪತಿ.— ಮಾನ್ಯ ಮಂತ್ರಿಗಳು ಹೇಳಿದಂತೆ ಯಾವುದೋ ಬ್ರಿಡ್ಜ್ ಬಿದ್ದು ಹೋದ ಕತೆಯಲ್ಲಿ ಅಪಾಯಿಂಟ್ ಮಾಡಿದವರ ಬಗ್ಗೆ ನಾನು ಕೇಳುತ್ತಿಲ್ಲ. ಲೋಕೋಪಯೋಗಿ ಇಲಾಖೆಗಳಲ್ಲಿ, ಮತ್ತಿತರ ಸರ್ಕಾರಿ ಇಲಾಖೆಗಳಲ್ಲಿ. ವರ್ಷಗಟ್ಟಲೆ, ಐದು ವರ್ಷ, ಹತ್ತು ವರ್ಷಗಳಿಂದ ಖಾಯಂ ಆಗಿ ಕೆಲಸ ಮಾಡುತ್ತಿರತಕ್ಕಂಥ ಕೆಲಸಗಾರರಿಗೆ, ತಾವು ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕಾದಂಥ ನೀತಿಯನ್ನು ತಾವು ಒಪ್ಪುತ್ತೀರಾ ? ಆ ರೀತಿಯಲ್ಲಿ ಕೆಲಸ ಮಾಡುತ್ತಿರುವವರಿಗಾದರೂ ಈ ಸೌಲಭ್ಯವನ್ನು ಕೊಡುತ್ತೀರಾ ? ಅವರಿಗೆ ಕೊಡದೇ ಇದ್ದರೆ, ಕೊಡುವುದಕ್ಕೆ ಆಥವಾ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ — ಈಗಾಗಲೇ ಸರ್ಕಾರ ಇದರ ಬಗ್ಗೆ ಏನು ನಿರ್ಣಯ ತೆಗೆದು ಕೊಂಡಿದೆ ಎನ್ನುವುದನ್ನು ಹಲವಾರು ಸಾರಿ ಈ ಸದನದಲ್ಲಿ ವಿವರಣೆ ಕೊಟ್ಟಿದ್ದೇನೆ. ಒಂಬತ್ತು ಕ್ಯಾಟಗರಿಗಳ ಬಗ್ಗೆ, ಸರ್ಕಾರ ಏನು ತೀರ್ಮಾನ ಮಾಡಿದೆ ಎಂದು ಈ ಸದನದಲ್ಲಿ ಹೇಳಿದ್ದೇನೆ. ಡ್ರೈವರ್ ಇರಬಹುದು, ವಾಚ್‌ಮನ್ ಇರಬಹುದು, ಮೇಟಿ ಇರಬಹುದು, ಅವರಿಗೆಲ್ಲಾ ಸರಿಯಾದ ಸಂಬಳವನ್ನು ಕೊಡುತ್ತೇವೆ. ಸುಮಾರು ಒಂದು ಸಾವಿರದ ಎಂಟುನೂರು ಚಿಲ್ಲರೆ ಜನರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡುತ್ತಿದ್ದೇವೆ. ಈಗ ಕೆ.ಆರ್.ಎಸ್.ನಲ್ಲಿ ೩೦ ವರ್ಷದಿಂದ ಇದ್ದಾರೆಂದು ಹೇಳಿದಿರಿ ಅವರಿಗೆ ಕೊಟ್ಟಿದ್ದೇವೆ. ಇವೊತ್ತು ಗ್ಯಾಂಗ್ ಕೂಲಿಯವರಿಗೆ ಎಷ್ಟು ಮಾಡೋಣ ಹೇಳಿ. ಮೇಂಟೆನೆನ್ಸ್ ಗ್ಯಾಂಟ್‌ನಲ್ಲಿ ಹೊಂದಿಕೊಳ್ಳಬೇಕಲ್ಲವೇ ? ಯಾರೋ ಕೆಲವರಿಗೆ ಐಡಿಯಾಸ್ ಇರುತ್ತದೆ, ಗ್ಯಾಂಗ್‌ಕೂಲಿ ಎಂದು ಇಟ್ಟುಕೊಳ್ಳುತ್ತಾರೆ, ಅವರು ಯಾವುದೋ ಒಂದು ಮಂರದ ಕೆಳಗೆ

ಮಂಲಗಿರುತ್ತಾರೆ, ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಬಂದರು ಎದ್ದು ಕುಳಿತುಕೊಳ್ಳುತ್ತಾರೆ. ಇವ್ರೊತ್ತು ನಿರುದ್ಯೋಗದ ಬಗ್ಗೆ ವಿಷಯ ಬೇರೆ, ಇವರನ್ನು ನಾವು ನೇಮಕ ಮಾಡುವಾಗ ಅರ್ಜಿಯನ್ನು ಕರೆದು ನೇಮಕ ಮಾಡಿದ್ದೇವೆಯೇ ? ಬೆಂಗಳೂರಿನಲ್ಲಿದ್ದಂಥ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರು ಹೋಗುವುದಕ್ಕಿ ಎಂಟು ದಿವಸ ಮುಂಚೆ ೭೮೦ ಜನರಿಗೆ ಅಪಾಯಿಂಟ್‌ಮೆಂಟ್ ಮಾಡಿ ಹೊರಟು ಹೋದರು, ಅದು ನಮಗೆ ಯಾರಿಗೂ ಗೊತ್ತಿಲ್ಲ. ಈಗ ಅವರಿಗೆಲ್ಲಾ ಬೆಂಗಳೂರು ಡಿವಿಜನ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಈಗ ಅವರನ್ನೆಲ್ಲಾ ಶಾಸಕರ ಭವನದ ಹತ್ತಿರ ಕಾಯುಲಿಕ್ಕೆ ಹಾಕೋಣವೇ ? ಪೊಲಿಟಿಕಲ್ ಪ್ರೆಜರ್ ಮೇಲೆ ಇವೆಲ್ಲಾ ಆಗುತ್ತದೆ. ನೀವು ಯಾವ ಊರಿಗೆ ಹೋದರೂ ಅರ್ಜಿಗಳನ್ನು ಹಿಡಿದುಕೊಂಡು ಬರುತ್ತಾರೆ. ಇವರ ಅವಶ್ಯಕತೆ ಇರಲಿ, ಇಲ್ಲದೇ ಇರಲಿ ಇವರನ್ನು ತೆಗೆದುಕೊಳ್ಳಿ ಎಂದು ಹೇಳುವಂತಾದ್ದು ಇರುತ್ತದೆ. ಸುಪ್ರೀಂ ಕೋರ್ಟ್ ನ್ಯಾಯಾಲಯಕ್ಕೆ ಈ ವಿಚಾರ ಹೋದ ಮೇಲೆ ಅವರು ಹೇಳಿದಂತೆ ಕೇಳಬೇಕಾಗುತ್ತದೆ. ಹಿಂದಿನ ಮಾಜಿ ಮುಖ್ಯ ನ್ಯಾಯಾಧೀಶರು ಒಂದು ಪ್ರೆಸ್ ಇಂಟರ್‌ವ್ಯೂನಲ್ಲಿ ಹೇಳಿದ್ದಾರೆ. ರಾಜಾಸ್ಥಾನ್‌ನಲ್ಲಿ ಹೊಟ್ಟೆಗೆ ಹಿಟ್ಟಿಲ್ಲದೆ, ಕಲ್ಲು ಹೊಡೆಯುವಂಥ ಹೆಣ್ಣು ಮಕ್ಕಳ ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದನ್ನು ಆ ನ್ಯಾಯಾಧೀಶರು ಹೇಳಿರುವ ಪ್ರೆಸ್ ಕಟಿಂಗ್‌ನ್ನು ನಾನು ನೋಡಿದ್ದೇನೆ. ಅವರು ಅದನ್ನು ಬಹಳ ಹೃದಯಂಗಮವಾಗಿ ವರ್ಣಿಸಿದ್ದಾರೆ. ಈ ಒಂದು ಪರಿಸ್ಥಿತಿ ಇರಬಾರದೆಂದು ಅವರು ಸೂಚನೆ ಕೊಟ್ಟಿದ್ದಾರೆ. ಆ ಪ್ರೆಸ್ ಕಟಿಂಗ್ಸ್ ನನ್ನ ಹತ್ತಿರ ಇದೆ. ನಾವು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೋಡೋಣ. ನಾನು ೧೯೬೨ನೇ ಇಸವಿಯಿಂದ ಈ ಸಭೆಗೆ ಸದಸ್ಯನಾಗಿ ಬಂದಾಗಿನಿಂದಲೂ ನೋಡುತ್ತಿದ್ದೇನೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಿಮ್ಮ ಸರ್ಕಾರೀ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇದೆಯೋ, ಇಲ್ಲವೋ? ಸರ್ಕಾರದಲ್ಲಿ ದುಡ್ಡೇ ಇಲ್ಲವೆಂದು ಬಹಳ ಜನ ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.— ನೌಕರರಿಗೆ ಕೊಡುವುದಕ್ಕೆ ನಮ್ಮಲ್ಲಿ ದುಡ್ಡು ಇಲ್ಲದೇ ಏನೂ ಇಲ್ಲ. ಆ ಭಾವನೆ ತಮಗೆ ಬೇಡ. ಇತ್ತೀಚೆಗೆ ಅವರಿಗೆ ಸಂಬಳವನ್ನು ಹೆಚ್ಚು ಮಾಡಿರುವುದು ತಮಗೂ ಕೂಡ ಗೊತ್ತಿದೆ. ನಾವು ಕೊಡದಿದ್ದರೂ ಅವರು ಹೇಗೆ ತೆಗೆದುಕೊಳ್ಳಬೇಕೆಂದು ಗೊತ್ತಿದೆ, ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ಡಿಸಿಷನ್ ಆಗುವವರೆಗೂ ಕಾದು ನೋಡೋಣವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಕೂಡಲಸಂಗಮ ದೇವಸ್ಥಾನದ ರಕ್ಷಣೆ

೩೩೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೂಡಲ ಸಂಗಮ ದೇವಸ್ಥಾನಕ್ಕೆ ಪೂರ್ವ ಕಾಲದ ಐತಿಹಾಸಿಕ ಹಿನ್ನೆಲೆ ಏನು ?

ಆ) ನಾರಾಯಣಪುರ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗುತ್ತಿರುವ ಈ ದೇವಸ್ಥಾನದ ರಕ್ಷಣೆಗಾಗಿ ಸರಕಾರದಿಂದ ತೆಗೆದುಕೊಂಡಿರುವ ಕಾಲ, ಕಾಲದ ನಿರ್ಣಯಗಳೇನು?

ಇ) ದೇವಸ್ಥಾನದ ರಕ್ಷಣೆಗಾಗಿ ಸಾರ್ವಜನಿಕರು ಮಾಡುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಸರಕಾರದವರು ತೆಗೆದುಕೊಳ್ಳುವ ನಿರ್ಣಯಗಳೇನು ?

ಈ) ದೇವಸ್ಥಾನದ ರಕ್ಷಣೆಗಾಗಿ ಇಲ್ಲಿಯವರೆಗೆ ತಯಾರಾಗಿರುವ ನೀಲಿ ನಕ್ಷೆ ಹಾಗೂ ಮಾಡಿರುವ ಖರ್ಚು ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೂಡಲ ಸಂಗಮವು ಶ್ರೀ ಬಸವಣ್ಣನವರು ಐಕ್ಯವಾದ ಸ್ಥಳವೆಂದು ತಿಳಿಯಲಾಗಿದೆ.

ಆ) ಹೊಸ ಸಂಗಮ ಸಂಕೀರ್ಣವನ್ನು ನಿರ್ಮಾಣ ಮಾಡಲು ೨೧೪ ಲಕ್ಷ ರೂ.ಗಳ ಅಂದಾಜಿಗೆ ದಿನಾಂಕ ೨೫-೫-೮೨ರ ಸರ್ಕಾರೀ ಆಜ್ಞೆಯಲ್ಲಿ ಅನುಮೋದನೆ ನೀಡಲಾಗಿದೆ. ನೂತನ ಶ್ರೀ